ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ
ಧನ್ವಂತರಿ ರಸ್ತೆ, ಆನಂದರಾವ್ ವೃತ್ತದ ಹತ್ತಿರ, ಬೆಂಗಳೂರು-560 009
ಇ-ಮೇಲ್ : directorayush@gmail.com
ದೂರವಾಣಿ ಸಂ:080-22876553, ಫ್ಯಾಕ್ಸ್ : 080-22340139

ಸಂಖ್ಯೆ:ಆಯುಷ್/34/ಅಭಿವೃದ್ಧಿ(3)/2016-17 ದಿನಾಂಕ: 22-11-2016

ಗೆ,

ಕಾರ್ಯನಿರ್ವಾಹಕ ನಿರ್ದೇಶಕರು,
ಕರ್ನಾಟಕ ಪರೀಕ್ಷಾ ಪ್ರಾಧಿಕಾರ,
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ,
ಮಲ್ಲೇಶ್ವರಂ,
ಬೆಂಗಳೂರು - 560 012.

ಮಾನ್ಯರೇ,

ವಿಷಯ:- 2016-17ನೇ ಸಾಲಿನ ಆಯುಷ್ ಪದವಿ ಕೋರ್ಸ್‌ಗಳ ಸೀಟ್ ಮ್ಯಾಟ್ರಿಕ್ಸ್ / Casual Vacancy Round ನ ಹಾಗೂ Walk-in-Interview ನಡೆಸುವ ಬಗ್ಗೆ.

ಉಲ್ಲೇಖ:- 1. ಈ ಕಛೇರಿಯ ಸಮ ಪತ್ರ ಸಂಖ್ಯೆ ದಿನಾಂಕ: 17-10-2016 ಮತ್ತು18-11-2016.
2. ಸರ್ಕಾರದ ಪತ್ರ ಸಂಖ್ಯೆ: ಆಕುಕ 230 ಪಿಟಿಡಿ 2016 ದಿನಾಂಕ: 20-08-2016, 07-11-2016. ಮತ್ತು 18-11-2016.
3. ಕಾರ್ಯನಿರ್ವಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು, ಇವರ ಪತ್ರ ಸಖ್ಯೆ: ಇಡಿ/ಕೆಇಎ/ಆಡಳಿತ/ಸಿಆರ್ 17/16-17. ದಿನಾಂಕ: 21-10-2016.
4. ಆಯುಷ್ ಮಂತ್ರಾಲಯದ ಪತ್ರ ಸಂಖ್ಯೆ: R.1101/01/ 2016-EP ದಿನಾಂಕ: 02-11-2016.

*******

ಉಲ್ಲೇಖ (1)ರ ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 17-10-2016ರಲ್ಲಿ ಕೇಂದ್ರ ಸರ್ಕಾರದಿಂದ ಎಲ್ಲಾ ಆಯುಷ್ ಕಾಲೇಜುಗಳ ಮಾನ್ಯತೆ ಸ್ವೀಕೃತವಾಗುವವರೆಗೆ ಹಾಗೂ ಕರ್ನಾಟಕ ಸರ್ಕಾರದಿಂದ ಪರಿಷ್ಕೃತ ಹಾಗೂ ಹೆಚ್ಚುವರಿ ಸೀಟ್ ಮ್ಯಾಟ್ರಿಕ್ ಆದೇಶ ಹೊರಡಿಸುವವರೆಗೆ ವಿದ್ಯಾರ್ಥಿಗಳ ಶೈಕ್ಷಣಿಕ ವ್ಯಾಸಂಗದ ಹಿತದೃಷ್ಟಿಯಿಂದ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಬಾರದೆಂದು ಮತ್ತು ಸರ್ಕಾರದಿಂದ ಹೆಚ್ಚುವರಿ ಸೀಟ್ ಮ್ಯಾಟ್ರಿಕ್ ಸೇರಿಸಿ ಪರಿಷ್ಕೃತ ಆದೇಶ ಹೊರಡಿಸಿದ ನಂತರ ಮತ್ತೊಂದು ಸುತ್ತಿನ ಕೌನ್ಸಿಲಿಂಗ್‌ನ್ನು ನಡೆಸುವಂತೆ ಕೋರಲಾಗಿರುತ್ತದೆ.

ಉಲ್ಲೇಖ (3)ರ ತಮ್ಮ ಪತ್ರ ದಿನಾಂಕ: 21-10-2016ರಲ್ಲಿ ಎಲ್ಲಾ ಕೋರ್ಸ್‌ಗಳ ಸೀಟು ಹಂಚಿಕೆಯ ಪ್ರಕ್ರಿಯೆಯನ್ನು ದಿನಾಂಕ: 07-10-2016ಕ್ಕೆ ಪೂರ್ಣಗೊಳಿಸಿದ್ದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಈ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ ಆಯುಷ್ ಕೋರ್ಸ್‌ಗಳ ಯಾವುದೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯನ್ನು ನಡೆಸಲು ಸಾಧ್ಯವಾಗುವುದಿಲ್ಲ. ಈ ಬಗ್ಗೆ ತಮ್ಮ ಇಲಾಖಾವತಿಯಿಂದ ಹಂಚಿಕೆ ಪ್ರಕ್ರಿಯೆಯನ್ನು ನಡೆಸಿದರೆ ಪ್ರಾಧಿಕಾರದಿಂದ ಬೇಕಾದ ಸಹಕಾರವನ್ನು ನೀಡಲಾಗುವುದು ಎಂದು ತಿಳಿಸಿರುತ್ತೀರಿ.

ಉಲ್ಲೇಖ (2)ರ ಸರ್ಕಾರದ ಪತ್ರ ದಿನಾಂಕ: 07-11-2016ರ ಪ್ರತಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಸರ್ಕಾರದ ಪತ್ರದ ಸೂಚನೆಯಂತೆ 2016-17ನೇ ಸಾಲಿನಲ್ಲಿ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಆಯುರ್ವೇದ, ಹೋಮಿಯೋಪತಿ, ಯುನಾನಿ ಮತ್ತು ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಪದವಿ ಕೋರ್ಸ್‌ಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾ ಸೀಟುಗಳಿಗೆ Casual Vacancy Round ನ ಹಾಗೂ Walk-in-Interview ತಮ್ಮ ಹಂತದಲ್ಲಿಯೇ ನಡೆಸುವಂತೆ ಸೂಚಿಸಿರುತ್ತಾರೆ.

1. ಬಿ.ಎಂ.ಕಂಕಣವಾಡಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬೆಳಗಾವಿ. ಈ ಸಂಸ್ಥೆಯನ್ನು ವೇತನ ಅನುದಾನದಿಂದ ಹೊರತೆಗೆಯಲಾಗಿದ್ದು ಹಾಗೂ ಸ್ವಾಯತ್ತ ವಿಶ್ವವಿದ್ಯಾಲಯ (Deemed University) ಸಂಸ್ಥೆಯಾದ್ದರಿಂದ ಈ ಸಂಸ್ಥೆಯೊಂದಿಗೆ ಸರ್ಕಾರಿ ಕೋಟಾ ಸೀಟುಗಳ ಹಂಚಿಕೆಗೆ ಸಂಬಂಧಿಸಿದಂತೆ ಒಡಂಬಡಿಕೆ ಮಾಡಿಕೊಳ್ಳಬೇಕಾಗಿರುತ್ತದೆ, ಆದ್ದರಿಂದ ಇಲ್ಲಿಗೆ ಸರ್ಕಾರಿ ಕೋಟಾ ಸೀಟುಗಳನ್ನು ಹಂಚಿಕೆ ಮಾಡಲಾದ ವಿದ್ಯಾರ್ಥಿಗಳಿಗೆ Casual Vacancy Round ನಲ್ಲಿ ಬೇರೆ ಮಹಾವಿದ್ಯಾಲಗಳಿಗೆ ಮರು ಹಂಚಿಕೆಗೆ ನಿಯಮಾನುಸಾರ ಅವಕಾಶ ಕಲ್ಪಿಸಲು ಕೋರಿದೆ.
2. ಬಿ.ಎಲ್.ಡಿ.ಇ.ಎಸ್. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬಿಜಾಪುರ, ಈ ಸಂಸ್ಥೆಯನ್ನು ವೇತನ ಅನುದಾನದಿಂದ ಹೊರತೆಗೆಯಲಾದ್ದರಿಂದ ಇಲ್ಲಿಗೆ ಸರ್ಕಾರಿ ಕೋಟಾ ಸೀಟಿಗೆ ಹಂಚಿಕೆ ಮಾಡಲಾದ ವಿದ್ಯಾರ್ಥಿಗಳಿಗೆ Casual Vacancy Round ನಲ್ಲಿ ಬೇರೆ ಮಹಾವಿದ್ಯಾಲಗಳಿಗೆ ಮರು ಹಂಚಿಕೆಗೆ ನಿಯಮಾನುಸಾರ ಅವಕಾಶ ಕಲ್ಪಿಸಲು ಕೋರಿದೆ.
3. 2016-17ನೇ ಸಾಲಿಗೆ ಮಾನ್ಯತೆ ಪಡೆದಿರುವ ಆಯುಷ್ ಕಾಲೇಜುಗಳ ಪಟ್ಟಿಯನ್ನು ಕೇಂದ್ರ ಸರ್ಕಾರವು ಒದಗಿಸದ ಕಾರಣ 2015-16ನೇ ಸಾಲಿನಲ್ಲಿ ಮಾನ್ಯತೆ ಪಡೆದಿರುವ ಕಾಲೇಜುಗಳಿಗೆ 2016-17ನೇ ಸಾಲಿಗೆ ಭಾರತ ಸರ್ಕಾರದ ಆಯುಷ್ ಮಂತ್ರಾಲಯರವರಿಂದ ಮಾನ್ಯತೆ ಪಡೆಯುವ ಷರತ್ತಿಗೊಳಪಟ್ಟು 2016-17ನೇ ಸಾಲಿಗೆ ಪ್ರವೇಶಾವಕಾಶ ಕಲ್ಪಿಸಲು ಈಗಾಗಲೇ ಉಲ್ಲೇಖ(1)ರ ಸರ್ಕಾರದ ಆದೇಶ ದಿನಾಂಕ: 20-08-2016ರನ್ವಯ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆಯಾಗಿರುವುದು ಸರಿಯಷ್ಟೆ. ಈ ಕೆಳಕಂಡ ಮಹಾವಿದ್ಯಾಲಯಗಳಿಗೆ ಇದುವರೆವಿಗೂ ಭಾರತ ಸರ್ಕಾರದ ಮಾನ್ಯತೆ ದೊರತಿರುವುದಿಲ್ಲ. ಸದರಿ ಮಹಾವಿದ್ಯಾಲಯಗಳಿಗೆ ಈಗಾಗಲೇ ಹಂಚಿಕೆ ಮಾಡಲಾದ ವಿದ್ಯಾರ್ಥಿಗಳಿಗೆ ಮಾನ್ಯತೆ ಹೊಂದಿದ ಬೇರೆ ಮಹಾವಿದ್ಯಾಲಯಗಳಿಗೆ ಸೀಟುಗಳನ್ನು Casual Vacancy Round ನ ಮುಖಾಂತರ ಮರು ಹಂಚಿಕೆಗೆ ನಿಯಮಾನುಸಾರ ಅಮಕಾಶ ಕಲ್ಪಿಸಲು ಕೋರಿದೆ.

| | |
|---|---|
| **Ayuveda** | |
| 1 | Ramakrishna Ayurveda Medical College, # 54/2 Ramagondanahalli, Yelahanka, **Bengaluru - 560064** |
| 2 | Sri Mallikarjuna Vidya Vardhaka Sanghas Rajeshwari Karpurmath Memorial Ayurvedic Medical College, 100FT Ring Road, Solapur Road, Behind KC Nagar, **Vijapura** |
| **Homoeopathy** | |
| 1 | Sri Satya Sai College of Homoeopathic Medical Sciences, Plot No. 19'C' Industrial Area, Sattur, Dharwad-09 |
| 2 | Dr.B.D.Jatti Homoeopathic Medical College, Saptampura Road, D.C.Compound, Dharwad-580001. |
| 3 | S.B.Shirkoli Homoeopathic Medical College, Anantha Vidhya Nagar, P.B.No.16, Sankeshwar-591313, Belagavi District |

ಈ ವಿಷಯದಲ್ಲಿ ತಮ್ಮಲ್ಲಿ ಕೋರಬಯಸುವುದೇನೆಂದರೆ ಮೇಲ್ಕಂಡ 07 ಆಯುಷ್ ಮಹಾವಿದ್ಯಾಲಯಗಳಿಗೆ ಈಗಾಗಲೇ ಸರ್ಕಾರಿ ಕೋಟಾ ಸೀಟುಗಳಿಗೆ ಹಂಚಿಕೆ ಮಾಡಲಾದ ವಿರ್ಥಿಗಳಿಗೆ Casual Vacancy Round ನಲ್ಲಿ ಭಾತರ ಸರ್ಕಾರದ ಆಯುಷ್ ಮಂತ್ರಾಲಯದಿಂದ ಮಾನ್ಯತೆ ಹೊಂದಿದ ಬೇರೆ ಮಹಾವಿದ್ಯಾಲಯಗಳಿಗೆ ಮರು ಹಂಚಿಕೆಗೆ ನಿಯಮಾನುಸಾರ ಅಮಕಾಶ ಕಲ್ಪಿಸಲು ಕೋರಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು (ಆಯುಷ್)

ಜಂಟಿ ನಿರ್ದೇಶಕರು

ಆಯುಷ್ ನಿರ್ದೇಶನಾ

**ಪ್ರತಿಯನ್ನು:-**

1. ಆಡಳಿತಾಧಿಕಾರಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012 – ತಮ್ಮ ಮುಂದಿನ ಕ್ರಮಕ್ಕಾಗಿ.
2. ಕಛೇರಿ / ಹೆಚ್ಚುವರಿ ಪ್ರತಿ.